ಮೇಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ ನ್ಯಾಯಾಲಯ, ಮುಧೋಳ

CC.No.927/2020

CW-2 PW-3

| | |
|---|---|
| ಹೆಸರು | ವಿಜಯಕುಮಾರ ಹುದ್ದಾರ |
| ತಂದೆ ಹೆಸರು | ವಿಠಲ |
| ವಯಸ್ಸು | 36 ವರ್ಷ |
| ಉದ್ಯೋಗ | ಮದ್ಯದ ಅಂಗಡಿಯಲ್ಲಿ ಕೆಲಸ |
| ವಾಸಸ್ಥಳ | ಸೋರಗಾಂವ ತಾಃ ಮುದೋಳ |

ದಿನಾಂಕಃ 27.03.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.

**ಮುಖ್ಯ ವಿಚಾರಣೆಃ- ಶ್ರಿ ಎ.ಪಿ.ಪಿ ವಕೀಲರಿಂದ ಃ**

ನನ್ನನ್ನು ಪೋಲಿಸರು ಪಂಚನಾಗುವಂತೆ ಕೇಳಿಕೊಂಡಿಲ್ಲ, ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ, ಮಹಜರನಲ್ಲಿ ಏನೂ ಬರೆದಿದೆ ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಈಗಾಗಲೇ ಗುರುತಿಸಿರುವ ನಿಪಿ-1 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಮುದೋಳದ ಶಿವಾಜಿ ಸರ್ಕಲ ಬಳಿ ಮಾಡಿದ್ದೇನೆ. ಅದರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಾನು ಆರೋಪಿತರನ್ನು ಈ ಹಿಂದೆ ನೋಡಿಲ್ಲ. ಈ ಕೇಸಿನ ಯಾವದೇ ವಿಚಾರ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು ಃ ಮಾನ್ಯ ಸ.ಸ.ಅ ರವರಿಂದ ಃ**

ದಿನಾಂಕ 06.02.2020 ರಂದು ನಾನು ಮತ್ತು ಚಾಸಾ-3 ರವರು ಮುದೋಳದ ತಾಲೂಕಾ ಪಂಚಾಯತ ಕಚೇರಿಯಲ್ಲಿದ್ದಾಗ ಚಾಸಾ-6 ರವರು ನಮ್ಮನ್ನು ಕರೆದುಕೊಂಡು ಹೋಗಿ ಚಾಸಾ-1 ರವರ ಮುಂದೆ ಹಾಜರಪಡಿಸಿದರು ಎಂದರೆ ಸರಿಯಲ್ಲ.ಚಾಸಾ-1 ರವರು ಬಾತ್ಮಿ ವಿಚಾರ ತಿಳಿಸಿ ನಮ್ಮನ್ನು ಪಂಚರಾಗಿ ಕರೆದರು ಎಂದರೆ ಸರಿಯಲ್ಲ. ನಾನು ಮತ್ತು ಚಾಸಾ-1,3 ಮತ್ತು ಇತರ ಸಿಬ್ಬಂದಿಯವರೊಂದಿಗೆ ಠಾಣಾ ಜೀಪನಲ್ಲಿ ಶಿರೋಳ ಗ್ರಾಮದಲ್ಲಿ ಮುದೋಳಕ್ಕೆ ಹೋಗುವ ಒಳ ರಸ್ತೆಯ ಸಮೀಪ ಜೀಪನ್ನು ಮರೆಯಲ್ಲಿ ನಿಲ್ಲಿಸಿ, ಚಾಚ ಮಾಡಿದ್ದೇವೆ ಎಂದರೆ ಸರಿಯಲ್ಲ. ನಂತರ ಅಲ್ಲಿ ಒಬ್ಬ ತನ್ನ ಹತ್ತಿರ ರಟ್ಟನ ಬಾಕ್ಸನಲ್ಲಿದ್ದ ತನ್ನ ಮುಂದೆ ನಿಂತಿದ ಜನರಿಗೆ ಚೀಲದಿಂದ ಮದ್ಯವನ್ನು ಕೊಟ್ಟು ಹಣವನ್ನು ಪಡೆಯುತ್ತಿದ್ದನು ಎಂದರೆ ಸರಿಯಲ್ಲ. ಚಾಸಾ-1 ರವರಿಗೆ ಸಂಶಯ ಬಂದು, ಅವರು ಸಿಬ್ಬಂದಿಯವರು ಸಾರಾಯಿ ಮಾರಾಟ ಮಾಡುತ್ತಿದ್ದಾನೆ ಎಂದು ಖಾತ್ರಿ ಪಡೆಸಿಕೊಂಡು, ಆತನನ್ನು ಗೇರಾವ ಹಾಕಿ ಹಿಡಿದರು ಮತ್ತು ಮುಂದೆ ಇದ್ದ ಸಾರ್ವಜನಿಕರು ಓಡಿ ಹೋದರು ಎಂದರೆ ಸರಿಯಲ್ಲ. ಚಾಸಾ-1 ರವರು ಆರೋಪಿತನಿಗೆ ಪರವಾಣಿಗೆ ಬಗ್ಗೆ ವಿಚಾರಿಸಲಾಗಿ ಪರವಾಣಿಗೆ ಇಲ್ಲ ಎಂದು ಹೇಳಿದನು ಎಂದರೆ ಸರಿಯಲ್ಲ.

ಸಿಕ್ಕ ವ್ಯಕ್ತಿಯನ್ನು ವಿಚಾರಿಸಲಾಗಿ ಅಂಬರೀಶ ಕಾಂಬಳೆ ಸಾಃ ಶಿರೋಳ ಅಂತಾ ಹೇಳಿದರು ಎಂದರೆ ಸರಿಯಲ್ಲ. ಸಿಕ್ಕ ವ್ಯಕ್ತಿಯ ಬಳಿ ಇದ್ದ ರಟ್ಟಿನ ಬಾಕ್ಸನಲ್ಲಿ ಪರಿಶೀಲಿಸಿ ನೋಡಲಾಗಿ ಅದರಲ್ಲಿವೆಲ್ಲಿಂಗನ ವಿಸ್ಕಿ ಅಂತಾ ಲೇಬಲ ಇರುವ 90 ಎಂ ಎಲ ಎನ ಒಟ್ಟು 114 ಸಾರಾಯಿ ಪೌಚಗಳು ಇದ್ದವು ಎಂಲರೆ ಸರಿಯಲ್ಲ. ನಂತರ ಆತನ ಅಂಗ ಜಪ್ತಿ ಮಾಡಲಾಗಿ ಆತನ ಹತ್ತಿರ 180/- ಹಣ ಸಿಕ್ಕವು ಎಂದರೆ ಸರಿಯಲ್ಲ.

ಸಿಕ್ಕ ಒಟ್ಟು 114 ಸರಾಯಿ ಪೌಚಳಿಗಂದ 2 ಪೌಚಗಳನ್ನು ಮತ್ತು ಸಿಕ್ಕ ಸಾರಾಯಿ ಪೌಚಗಳಲ್ಲಿ ಒಂದು 180 ಎಂ ಎಲ ಅಳೆಯ ಪೌಚನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದುಕೊಂಡು ನಾನು, ಚಾಸಾ-1 ಮತ್ತು 3 ರವರು ಸಹಿ ಮಾಡಿದ ಚೀಟಿಯನ್ನು ಅಂಟಿಸಿದೇವು ಎಂದರೆ ಸರಿಯಲ್ಲ. ಚಾಸಾ-1 ರವರು ನಿಪಿ-1 ರಂತೆ ನನ್ನ ಸಮಕ್ಷಮ ವಿವರವಾದ ಪಂಚನಾಮೆ ತಯಾರಿಸಿ ಅದನ್ನು ನಾನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲೌ. ಘಟನಾ ಸ್ಥಳದಲ್ಲಿ ಆರೋಪಿತನನ್ನು ನೋಡಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟಿ ಸವಾಲುಃ ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ